ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ
–ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ

EDITOR:SIDRAMAYYA SWAMY

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ... ಏಕೆಂದರೆ... ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು...

bidarvani.com | ಇ-ಪೇಪರ್bidarvani.online | bidarvani | bidarvani@gmail.com | Whatsapp | Contact:9148471077

KARKAN/77693/2019 | ಸಂಪುಟ:08 | ಸಂಚಿಕೆ:206 | ದಿನಾಂಕ:15.11.2025 | ಶನಿವಾರ | ಪುಟ.4 | ಬೆಲೆ:02 ರೂ | ಮೊ.9945793175


## ನೈಸರ್ಗಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ರೈತರನ್ನು ಪ್ರೇರೇಪಿಸಿ–ಡಾ.ಎಸ್.ವಿ.ಪಾಟೀಲ್



ಬೀದರ.ನ.14:ಕೃಷಿ ಸಖಿಯರು ಪ್ರಸ್ತುತ ನೈಸರ್ಗಿಕ ಕೃಷಿ ತರಬೇತಿಯ ಸುದುಪಯೋಗವನ್ನು ಪಡೆದುಕೊಂಡು ಹೆಚ್ಚಿನ ರೈತರಿಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಿ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಬೇಕೆಂದು ಬೀದರ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಹಾಗೂ ತರಬೇತಿಯ ಆಯೋಜಕರಾದ ಡಾ.ಎಸ್.ವಿ. ಪಾಟೀಲ್ ಸಲಹೆ ನೀಡಿದರು.

ಅವರು ಗುರುವಾರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ, ತೋಟಗಾರಿಕಾ ಮಹಾವಿದ್ಯಾಲಯ ಬೀದರ ಮತ್ತು ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್, ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ, ಭಾರತ ಸರ್ಕಾರ, ನವದೆಹಲಿ ಇವರ ಸಹಯೋಗದಲ್ಲಿ ಬೀದರ ಜಿಲ್ಲೆಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ಬೀದರ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ (ಕೃಷಿ ಸಖಿಗಳಿಗೆ) ಆಯೋಜಿಸಲಾಗಿದ್ದ “ನೈಸರ್ಗಿಕ ಕೃಷಿ” ಕುರಿತು ಐದು ದಿನಗಳ ತರಬೇತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕೀಟನಾಶಕಗಳು, ಹಸುವಿನ ಗಂಜಲ, ಗೋಮೂತ್ರ, ಬೆಲ್ಲ, ದ್ವಿದಳ ಧಾನ್ಯಗಳ ಹಿಟ್ಟಿನ ಮಿಶ್ರಣಗಳ ಬಳಕೆಯನ್ನು ಅಳವಡಿಸಿ ಬೆಳೆಗಳಿಗೆ ಅಗತ್ಯ ಪೋಷಕಾಂಶ ಒದಗಿಸುವುದು, ಮಣ್ಣನ್ನು ಹದವಾಗಿಸುವುದು. ಮಣ್ಣಿನಲ್ಲಿನ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದು, ಹೊರಗಿನ ಯಾವುದೇ ಪರಿಕರಗಳನ್ನು ಖರೀದಿಸದೇ ಕೈಗೊಳ್ಳುವ ಕೃಷಿಯಾಗಿದೆ. ಈ ಪದ್ಧತಿಯಲ್ಲಿ ಹಲವಾರು ರೀತಿಯ ಪರಿಕರಗಳನ್ನು ರೈತರೇ ತಯಾರಿಸಿ ಬಳಸುವುದು ಉತ್ತಮ. ಇದರಿಂದ ರೈತರಲ್ಲಿ ಆತ್ಮವಿಶ್ವಾಸ ಮೂಡುತ್ತದೆ. ನೈಸರ್ಗಿಕವಾಗಿ ರೈತರ ಕ್ಷೇತ್ರದಲ್ಲಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ತಯಾರು ಮಾಡುವ ಜೈವಿಕ ನಿಯಂತ್ರಣ ಪರಿಕರಗಳು/ಸಸ್ಯಜನ್ಯ ಕೀಟನಾಶಕಗಳನ್ನು ಬಳಸಬೇಕು. ವಿವಿಧ ರೀತಿಯ ಕೀಟನಾಶಕಗಳು, ಅತೀ ಹೆಚ್ಚು ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಫಲವತ್ತು ಕ್ಷೀಣಿಸುತ್ತಿದೆ ಮತ್ತು ಮಾನವನ ದೇಹದ ಮೇಲೆಯು ಸಹ ದುಷ್ಪರಿಣಾಮ ಬೀರುತ್ತಿದೆಂದರು.

ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರಾದ ದೇವಿಕಾ ಆರ್. ಮಾತನಾಡಿ, ರೈತರು ಸಾಂಪ್ರದಾಯಿಕ ಕೃಷಿಯಿಂದ ಹೊರಬಂದು ಅದರಲ್ಲೂ ಏಕ ಕೃಷಿ ಪದ್ಧತಿಗೆ ಜೋತು ಬೀಳದೆ ಹೊಸ ಪ್ರಯೋಗಗಳನ್ನು ಕೈಗೊಳ್ಳಬೇಕು. ಕೃಷಿ ಬೆಳೆಗಳಲ್ಲಿ ಅತೀ ಹೆಚ್ಚು ರಾಸಾಯನಿಕ ಕೀಟಗಾಶಕ ಮತ್ತು ಗೊಬ್ಬರಗಳನ್ನು ಬಳಕೆ ಮಾಡುತ್ತಿರುವುದರಿಂದ ಹವಾಮಾನದಲ್ಲಿ ತುಂಬಾ ವೈಪರೀತ್ಯ ಉಂಟಾಗಿ, ಮಾನವನ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡುತ್ತಿದೆ. ರಾಸಾಯನಿಕ ಮುಕ್ತ ಕೃಷಿಗೆ ಒತ್ತು ನೀಡುತ್ತಾ, ನೈಸರ್ಗಿಕ ಕೃಷಿ ಕಡೆಗೆ ರೈತರು ಒತ್ತು ನೀಡುತ್ತಿರುವುದು ಇತ್ತೀಚೆಗಿನ ಬೆಳವಣಿಗೆಯಾಗಿದೆ. ಬಹುಬೆಳೆ, ಕೃಷಿ ಜೊತೆಗೆ ಸಾವಯವ ಕೃಷಿಯೂ ಗಮನಾರ್ಹವಾಗಿದೆ. ಆರೋಗ್ಯದ ಹಿತದೃಷ್ಟಿಯಿಂದ ಜನರು ಕೂಡ ಸಾವಯವ ಬೆಳೆಯನ್ನು ಬಳಸುತ್ತಿರುವುದರಿಂದ ಬೇಡಿಕೆ ಹೆಚ್ಚುತ್ತಿದೆ. ಅದಕ್ಕೆ ತಕ್ಕಂತೆ ರೈತರು ಕೃಷಿಯನ್ನು ಅಳವಡಿಸಿಕೊಂಡರೆ ಲಾಭ ಗಳಿಸಲು ಸಾಧ್ಯವಾಗಲಿದೆ ಎಂದರು.

ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ವಿಶ್ವನಾಥ ಝಿಳ್ಳೆ ಮಾತನಾಡಿ, ಸಾವಯವ ಕೃಷಿಯು ಮಣ್ಣಿನ ಗುಣಮಟ್ಟವನ್ನು ಕಾಪಾಡುತ್ತದೆ ಮತ್ತು ಉತ್ತಮ ಫಲಿತಾಂಶಗಳನ್ನು ದೊರಕಿಸುತ್ತದೆ. ಸಾವಯವ ಕೃಷಿಯ ಮೂಲಕ ಬೆಳೆದ ಬೆಳೆ ವಿಪುಲವಾದ ಪೋಷಕಾಂಶಗಳಿಂದ ತುಂಬಿರುತ್ತದೆ. ಇದು ಆಹಾರದ ನೈಸರ್ಗಿಕ ರುಚಿಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ಸಾಮಾನ್ಯ ಕೃಷಿಯಲ್ಲಿ ಬಳಸುವ ಹಾನಿಕಾರಕ ರಾಸಾಯನಿಕಗಳಿಂದ ನಮ್ಮನ್ನು ದೂರವಿರಿಸುತ್ತದೆ. ಸಾವಯವ ಕೃಷಿಯಲ್ಲಿ ಸಸ್ಯ ರೋಗದ ಅಪಾಯಗಳು ಕಡಿಮೆ, ಹೀಗಾಗಿ ವೆಚ್ಚ ಕಡಿಮೆ ಮತ್ತು ಉತ್ಪಾದನೆಯು ರೈತರಿಗೆ ಹೆಚ್ಚು ಲಾಭದಾಯಕ. ಸಾವಯವಾಗಿ ಬೆಳೆದ ಆಹಾರ ಧಾನ್ಯಗಳು ವಿದೇಶದಲ್ಲಿ ಬೇಡಿಕೆ ಹೆಚ್ಚು. ಪ್ರಯುಕ್ತ ನಮ್ಮ ರೈತರು ಹೆಚ್ಚಿನ ರೀತಿಯಲ್ಲಿ ರಫ್ತು ಮಾಡಿ ತಮ್ಮ ಆದಾಯವನ್ನು ಸಹ ದ್ವಿಗುಣಗೊಳಿಸಿಕೊಳ್ಳಬಹುದು ಎಂದು ಹೇಳಿದರು.

## ಕಲಬುರಗಿ ಮಾದರಿಯಂತೆ ಬೀದರ್ ರೈತರಿಗೆ 3200 ಬೆಲೆ ನಿಗದಿ ಮಾಡಿ: ಸೋಮನಾಥ ಪಾಟೀಲ

ಬೀದರ್.ನ.14:ಕಲಬುರಗಿ ಜಿಲ್ಲೆಯ ಕಬ್ಬು ಪುರೈಸಿದ ರೈತರಿಗೆ ಪ್ರತಿ ಟನ್‌ಗೆ 3,172 ನೀಡಲು ಅಲ್ಲಿಯ ಜಿಲ್ಲಾಡಳಿತ ಮುಂದಾಗಿದ್ದು, ಬೀದರ್ ಜಿಲ್ಲಾಡಳಿತವು ಸಹ ಪ್ರತಿ ಟನ್‌ಗೆ 3,200 ನಿಗದಿಗೊಳಿಸಬೇಕೆಂದು ಭಾರತೀಯ ಜನತಾ ಪಕ್ಷದ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ ಹೇಳಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಪಕ್ಕದ ಕಲಬುರಗಿ ಜಿಲ್ಲೆಯಲ್ಲಿ ರು.3,172 ನೀಡಲು ಮುಂದೆ ಬಂದಿರುವಾಗ ಇಲ್ಲಿ ಏಕೆ ಸಾಧ್ಯವಿಲ್ಲ? ಈಗಾಗಲೇ ಸಕ್ಕರೆ ಖಾತೆ ಸಚಿವ ಶಿವಾನಂದ ಪಾಟೀಲ ಮಾತನಾಡಿ, ಬೆಳಗಾವಿಗೆ ಒಂದು ಬಾಗಲಕೋಟೆಗೆ ಒಂದು ಕಾನೂನು ಇರುವುದಿಲ್ಲ ಎಂದು ಹೇಳಿದ್ದಾರೆ. ಹೀಗಿರುವಾಗ ಕಲಬುರಗಿ ಹಾಗೂ ಬೀದರ್‌ಗೆ ಪ್ರತ್ಯೇಕ ದರವೇಕೆ? ಎಂದು ಪ್ರಶ್ನೆ ಮಾಡಿದರು.

ಮಹಾರಾಷ್ಟ್ರದಲ್ಲಿ ಈಗಾಗಲೇ ಪ್ರತಿ ಹೆಕ್ಟೆರ್‌ಗೆ 48,000 ನೀಡಿದ್ದು, ರಾಜ್ಯದಲ್ಲಿ ಕೇವಲ 17,000 ನೀಡಲು ಮುಂದಾಗಿದೆ. ಈಗ ಕೇವಲ 8,500 ನೀಡಿದ್ದು, ಉಳಿದ ಹಣ ಯಾವಾಗ ಬರುತ್ತೊ ಕಾದು ನೋಡಬೇಕಿದೆ ಎಂದು ವ್ಯಂಗ್ಯವಾಡಿದರು.

ಈಗಾಗಲೆ ಉತ್ತರ ಕರ್ನಾಟಕದ ಸಂಕಷ್ಟದಲ್ಲಿದ್ದಾನೆ. ರಾಜ್ಯದಲ್ಲಿ ಪೋಲಿಸ್ ಸ್ಟೇಷನ್‌ಗಳು ಕಾಂಗ್ರೆಸ್ ಕಚೇರಿಗಳಾಗಿ, ಪೋಲಿಸ್‌ರು ಕಾಂಗ್ರೆಸ್ ಏಜೆಮಟ್‌ಗಳಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿಭಟನಾಕಾರರನ್ನು ಹತ್ತಿಕ್ಕಲು ಸರ್ಕರದ ತಾಳಕ್ಕೆ ಹೆಜ್ಜೆ ಹಾಕುತ್ತಿರುವುದು ಪ್ರಜಾಪ್ರಭುತ್ವದಕ್ಕೆ ಮಾರಕ. ಇತ್ತಿಚೀಗೆ ಹುಮನಾಬಾದ್‌ನಲ್ಲಿ ರೈತರೊಂದಿಗೆ ಸೇರಿ ಹೋರಾಟಕ್ಕೀದ ನಮ್ಮವರನ್ನು ಹಾಗೂ ರೈತರನ್ನು ಬಂಧಿಸಿ, ನಮ್ಮ ಕೈಯಲ್ಲಿದ್ದ ಫಲಕಗಳನ್ನು ಕಸಿದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈಶ್ವರ ಬಿ. ಖಂಡ್ರೆಯವರು ಭಾಲ್ಕಿ ಉಸ್ತುವಾರಿ ಸಚಿವರಾ? ಅಥವಾ ಬೀದರ್ ಜಿಲ್ಲೆಯ ಉಸ್ತುವಾರಿಗಳಾ? ಭಾಲ್ಕಿ ತಾಲ್ಲೂಕಿನ ಎಲ್ಲಾ ರೈತರ ಖಾತೆಗೆ ಅತಿವೃಷ್ಟಿ ಪರಿಹಾರದ ಹಣ ಜಮೆಯಾಗಿದೆ. ಆದರೆ, ಜಿಲ್ಲೆಯ ಹುಮನಾಬಾದ್, ಬೀದರ್, ಬಸವಕಲ್ಯಾಣ ಸೇರಿದಂತೆ ಇತರೆ ತಾಲ್ಲೂಕುಗಳ ರೈತರಿಗೆ ಪರಿಹಾರ ನೀಡಿಲ್ಲ’ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಹೇಳಿದರು.




## ಪೋಲಿಸ್‌ರ ಎದುರೆ ರೈತರನ್ನು ಥಳಿಸಿದ ಕಾಂಗ್ರೆಸ್ ಕಾರ್ಯಕರ್ತನ ಗುಣಡಾಗಿರಿ ಖೇದನಿಯ:ಸಿದ್ದು ಪಾಟೀಲ




ಬೀದರ್.ನ.14:ಹುಮನಾಬಾದ್ ಶಾಸಕ ಡಾ. ಸಿದ್ದಲಿಂಗಪ್ಪ ಪಾಟೀಲ್ ಮಾತನಾಡಿ, ಕಬ್ಬಿಗೆ ಬೆಂಬಲ ಬೆಲೆ ನಿಗದಿಪಡಿಸಬೇಕೆಂದು ಆಗ್ರಹಿಸಿ ರೈತರು ಹುಮನಾಬಾದ್‌ನಲ್ಲಿ ನ. 12ರಂದು ರಾಷ್ಟ್ರೀಯ ಹೆದ್ದಾರಿ ತಡೆ ಹೋರಾಟ ಇಟ್ಟುಕೊಂಡಿದ್ದರು. ಮೂರು ದಿನಗಳ ಮುಂಚೆಯೇ ಬಿಜೆಪಿ ಈ ಹೋರಾಟವನ್ನು ಬೆಂಬಲಿಸಿ, ಅದರಲ್ಲಿ ಪಾಲ್ಗೊಳ್ಳುವುದಾಗಿ ಹೇಳಿತ್ತು. ಆನಂತರ ಇತರೆ ಪಕ್ಷಗಳು ಕೂಡ ಬೆಂಬಲ ಸೂಚಿಸಿದವು. ಆದರೆ, ನ. 12ರಂದು ಹೋರಾಟ ನಡೆಸುವಾಗ ನನ್ನ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷರನ್ನು ಪೊಲೀಸರು ಬಂಧಿಸಿ, ಬೇರೆಡೆ ಕರೆದೊಯ್ದರು. ಆದರೆ, ಆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಮುಖಂಡರೂ ಆದ ಮಾಜಿ ಸಚಿವ ರಾಜಶೇಖರ್ ಪಾಟೀಲ್ ಹುಮನಾಬಾದ್, ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ್ ಅವರನ್ನು ಪೊಲೀಸರು ಬಂಧಿಸಲಿಲ್ಲ ಎಂದರು.

ರಾಜ್ಯ ಸರ್ಕಾರ ಮಲಗಿದೆ. ಸರ್ಕಾರ ರೈತರ ವಿರುದ್ಧವಾಗಿದೆ ಎಂದು ಕಾಂಗ್ರೆಸ್ ಮುಖಂಡರು ಆ ಪ್ರತಿಭಟನೆಯಲ್ಲಿ ಭಾಗವಹಿಸಿ ತೋರಿಸಿಕೊಟ್ಟಿದ್ದಾರೆ. ವಿರೋಧ ಪಕ್ಷವಾಗಿ ಬಿಜೆಪಿಯವರಾದ ನಾವು ಸರ್ಕಾರದ ವಿರುದ್ಧದ ಈ ಹೋರಾಟದಲ್ಲಿ ಪಾಲ್ಗೊಂಡಿದ್ದೆವು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರೆ ಸಚಿವರ ಭಾವಚಿತ್ರಗಳನ್ನು ಹಿಡಿದು ಶಾಂತಿಯುತ ಪ್ರತಿಭಟನೆ ಮಾಡುತ್ತಿದ್ದೆವು. ಆದರೆ, ಪೊಲೀಸರು ನಮ್ಮ ಬಳಿಯಿದ್ದ ಭಾವಚಿತ್ರಗಳನ್ನು ಕಸಿದುಕೊಂಡು ಹರಿದು ಹಾಕಿದರು. ಬಳಿಕ ನಮ್ಮನ್ನು ಬಂಧಿಸಿ ಬೇರೆಡೆ ಕರೆದೊಯ್ದರು. ಅದೇ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಮುಖಂಡರನ್ನು ಬಂಧಿಸಿಲ್ಲವೇಕೆ? ಎಂದು ಪ್ರಶ್ನಿಸಿದರು.ಹುಮನಾಬಾದ್‌ನಲ್ಲಿ ಪೊಲೀಸರ ಕಸ್ಟಡಿಯಲ್ಲಿದ್ದ ಹೋರಾಟಗಾರರ ಮೇಲೆ ಯುವ ಕಾಂಗ್ರೆಸ್ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ. ಇದೆಲ್ಲ ಪೊಲೀಸರ ಸಮ್ಮುಖದಲ್ಲೇ ನಡೆದಿದೆ. ಭೀಮರಾವ್ ಪಾಟೀಲ್ ಕೂಡ ಅಲ್ಲೇ ಇದ್ದರು. ಇದು ಪೊಲೀಸರ ವೈಫಲ್ಯ ಅಲ್ಲವೇ? ಇದಕ್ಕೆ ಸಂಬಂಧಿಸಿದ ವಿಡಿಯೋಗಳನ್ನು ಎಸ್ಪಿ ಹಾಗೂ ಡಿವೈಎಸ್ಪಿ ಅವರೊಂದಿಗೆ ಹಂಚಿಕೊಂಡು ಸ್ವಯಂಪ್ರೇರಿತ ಪ್ರಕರಣ ದಾಖಲಿಸಬೇಕೆಂದು ಹೇಳಿದ್ದೆ. ಆದರೆ, ಇದುವರೆಗೆ ಆ ಕೆಲಸ ಮಾಡಿಲ್ಲ. ಇದರ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ರೈತರ ಹೋರಾಟದ ಮುನ್ನ ದಿನ ಪಿಎಸ್‌ಐ ನನ್ನ ಬಳಿ ಬಂದು ರಾಷ್ಟ್ರೀಯ ಹೆದ್ದಾರಿಯಲ್ಲಿ 10 ನಿಮಿಷ ಪ್ರತಿಭಟನೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದ್ದರು. ಮರುದಿನ ಇದೇ ಪೊಲೀಸರು, ಹೆದ್ದಾರಿಯಲ್ಲಿ ಪ್ರತಿಭಟನೆಗೆ ಅವಕಾಶ ಕಲ್ಪಿಸುವುದಿಲ್ಲ ಎಂದರು. ಇದರಿಂದ ಗೊಂದಲ ಸೃಷ್ಟಿಯಾಯಿತು ಎಂದು ಆರೋಪಿಸಿದರು.

ನನ್ನ ಹುಮನಾಬಾದ್ ಮತಕ್ಷೇತ್ರವು ಬೀದರ್ ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಹಂಚಿ ಹೋಗಿದೆ. ನನ್ನ ಕ್ಷೇತ್ರದ ಕೆಲವು ಹಳ್ಳಿಗಳ ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ ಕಲಬುರಗಿಯಲ್ಲಿ ?3,172 ಬೆಲೆ ಸಿಗುತ್ತಿದೆ. ಬೀದರ್ ಜಿಲ್ಲೆಯ ಹಳ್ಳಿಗಳಿಗೆ ಕಡಿಮೆ ಕೊಟ್ಟರೆ ಹೇಗೆ? ಕಲಬುರಗಿಯಂತೆ ದರ ನಿಗದಿಪಡಿಸಿ ರೈತರಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಕಬ್ಬು ಬೆಳೆಗಾರರ ಹೋರಾಟವನ್ನು ಬಿಜೆಪಿ ಪ್ರಚೋದಿಸುತ್ತಿದೆ ಎಂದು ಕಾಂಗ್ರೆಸ್ ಮುಖಂಡರು ಮಾಡಿರುವ ಆರೋಪ ಸತ್ಯಕ್ಕೆ ದೂರವಾದದ್ದು. ಏಕೆಂದರೆ ಇದು ಪಕ್ಷಾತೀತವಾದ ಹೋರಾಟವಾಗಿತ್ತು.

## ಮಕ್ಕಳ ದಿನಾಚರಣೆ: ಶ್ರೀ ಮಡಿವಾಳೇಶ್ವರ ಶಾಲೆಯಲ್ಲಿ ಸಂಭ್ರಮ

ಬೀದರ.ನ.14:ಸರಸ್ವತಿ ಶಿಕ್ಷಣ ವಿಕಾಸ ಸಮಿತಿಯಡಿ ಕಾರ್ಯನಿರ್ವಹಿಸುವ ಶ್ರೀ ಮಡಿವಾಳೇಶ್ವರ ಶಿಶುಮಂದಿರ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಮಕ್ಕಳ ದಿನಾಚರಣೆ ಭವ್ಯವಾಗಿ ಜರುಗಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಹಾಜರಾಗಿದ್ದ ಶಿಕ್ಷಕಿ ಶ್ರೀದೇವಿ ವೆಂಕಟ ಮಾತನಾಡಿ,“ಮಕ್ಕಳು ಒಳ್ಳೆಯ ಗುಣಗಳು ಮತ್ತು ಸಂಸ್ಕಾರಗಳನ್ನು ಬಾಲ್ಯದಲ್ಲಿಯೇ ಬೆಳೆಸಿಕೊಂಡರೆ ಭವಿಷ್ಯದಲ್ಲಿ ಮಹತ್ತರ ಸಾಧನೆ ಮಾಡಬಹುದು. ನೆಹರು ಅವರಿಗೆ ಮಕ್ಕಳು ಅತೀವ ಪ್ರಿಯರು; ಅವರ ಜನ್ಮದಿನವನ್ನೇ ಮಕ್ಕಳ ದಿನವನ್ನಾಗಿ ಆಚರಿಸುತ್ತೇವೆ,” ಎಂದು ಹೇಳಿದರು.ಅವರು ಮುಂದುವರೆದು,“ಮಕ್ಕಳು ಕೇವಲ ಫಲಿತಾಂಶಕ್ಕಾಗಿ ಓದದೆ ಜ್ಞಾನಕ್ಕಾಗಿ ಓದಬೇಕು. ತಂದೆ□ತಾಯಿಗಳಿಗೆ ಗೌರವ ನೀಡಬೇಕು. ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಸ್ವ–ಸಾಮರ್ಥ್ಯವನ್ನು ದಿನದಿಂದ ದಿನಕ್ಕೆ ವೃದ್ಧಿಸಿಕೊಳ್ಳಬೇಕು. ಹಕ್ಕುಗಳ ಜೊತೆಗೆ ಕರ್ತವ್ಯಗಳ ಬಗ್ಗೆಯೂ ಅರಿವು ಇರಬೇಕು,” ಎಂದು ಮಕ್ಕಳಿಗೆ ಸ್ಪೂರ್ತಿನುಡಿ ಹೇಳಿದರು.

ಸಂಸ್ಥೆಯ ಕಾರ್ಯದರ್ಶಿಗಳು ತಮ್ಮ ಅಧ್ಯಕ್ಷೆಯ ಮಾತಿನಲ್ಲಿ,“ಇಂದಿನ ಮಕ್ಕಳೇ ನಾಳಿನ ಬುದ್ಧಿವಂತ ಪ್ರಜೆಗಳು. ಸಂಸ್ಕಾರ ಮತ್ತು ಸಂಸ್ಕೃತಿ ಮನೆತನದಲ್ಲೇ ದೊರೆಯಬೇಕು. ತಾಯಿ ಹೇಗೆ ಮಗುವನ್ನು ಬೆಳೆಸುತ್ತಾಳೋ, ಆ ರೀತಿಯ ವ್ಯಕ್ತಿತ್ವ ಮಗುವಿನಲ್ಲೂ ಬೆಳೆದು ಬರುತ್ತದೆ. ಬಾಲ್ಯದಲ್ಲಿಯೇ ಪ್ರಾಮಾಣಿಕ ಜೀವನ ಮತ್ತು ಉತ್ತಮ ಸಂಸ್ಕಾರ ಶಿಕ್ಷಣ ದೊರೆತರೆ, ಅವರು ನಾಳೆ ದೇಶಕ್ಕೆ ಆದರ್ಶ ಪ್ರಜೆಗಳಾಗಲು ಸಾಧ್ಯ,” ಎಂದು ಅಭಿಪ್ರಾಯಪಟ್ಟರು.

ಸ್ಪರ್ಧೆಗಳು ಮತ್ತು ಬಹುಮಾನ ವಿತರಣಾ ಮಕ್ಕಳ ದಿನಾಚರಣೆಯ ಅಂಗವಾಗಿ ವಿವಿಧ ಸ್ಪರ್ಧೆಗಳು ನಡೆದಿದ್ದು, ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಪ್ರದಾನ ಮಾಡಲಾಯಿತು.

ವಿದ್ಯಾರ್ಥಿ ಪ್ರತಿನಿಧಿ ತ್ರಿಶಾ ಸಿದ್ದೇಶ್ವರ ಮಾತನಾಡಿ, “ಪಠ್ಯಪುಸ್ತಕಗಳ ಜೊತೆಗೆ ಕ್ರೀಡೆ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿಯೂ ನಾವು ಸಾಧನೆ ಮಾಡಬೇಕು. ಪರಸ್ಪರ ಸ್ನೇಹ ಮತ್ತು ಸೌಹಾರ್ದ ಬೆಳೆಸಿಕೊಳ್ಳಬೇಕು. ವಸುದೈವ ಕುಟುಂಬಕಮ್ ಎಂಬ ಕಲ್ಪನೆಯನ್ನು ಅಳೆಯಬೇಕು,” ಎಂದು ತಿಳಿಸಿದರು.

ವೈಷ್ಣವಿ ರಾಜೇಂದ್ರ ಪ್ರಸಾದ್ ಮಕ್ಕಳ ಹಕ್ಕುಗಳು, ಕರ್ತವ್ಯಗಳು ಮತ್ತು ಬಾಲ ಪುರಸ್ಕಾರದ ಬಗ್ಗೆ ವಿವರಿಸಿದರು.

ತೀಕ್ಷಾ ಶ್ರೀನಿವಾಸ್ ಅಮೃತವಚನ ಹೇಳಿ ಎಲ್ಲರ ಮನಗೆದ್ದರು.ಸಾನ್ವಿ ಸುರೇಶ್ ಶ್ಲೋಕ ಪಠಿಸಿದರು. ಸೂರ್ಯಕಾಂತ್ ರೂಪನರ್ ಕಾರ್ಯಕ್ರಮವನ್ನು ನಿರ್ವಹಿಸಿದರು. ಪ್ರತಿಭಾ ತೇಲಿ ಸ್ವಾಗತ, ಭುವನೇಶ್ವರಿ ವಂದನೆ ಸಲ್ಲಿಸಿದರು.

ಪ್ರೌಢ ಶಾಲೆಯ ಮುಖ್ಯಗುರು ಶರಣು ಪಾಟೀಲ್, ಪ್ರಾಥಮಿಕ ಶಾಲೆಯ ಮುಖ್ಯಗುರು ಅರ್ಚನಾ ಸಿರಿಗೆರೆ, ಎಲ್ಲಾ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ಉಚಿತ ನೇತ್ರ ತಪಾಸಣಾ ಶಿಬಿರ ಸದಪಯೋಗಕ್ಕೆ ಕರೆ




ಜೇವರ್ಗಿ:ನ14:ತಾಲೂಕಿನ ಬೀರನೂರು ಗ್ರಾಮ ಪಂಚಾಯಿತಿ ಹಾಗೂ. ವೇದ ಕಣ್ಣಿನ ಆಸ್ಪತ್ರೆ ಯಾದಗೀರಿ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಕಾಯಕ ಗ್ರಾಮ ಘೋಷಣೆ ಹಾಗೂ ಗ್ರಾಮ ಪಂಚಾಯತಿ ಸಮಗ್ರ ಅಭಿವೃದ್ಧಿಗೆ

ಉಚಿತ ನೇತ್ರ ತಪಾಸಣಾ ಶಿಬಿರ ಕಾರ್ಯಕ್ರಮ ಆಯ್ಕೆ ವಾತ ನಾಡಿದ ಪಂಚಾಯುತಿ ಅಭಿವೃದ್ಧಿ ಅಧಿಕಾರಿ ದೇವರಾಜ್ ಮೌರ್ಯ ಮಾತನಾಡುತ್ತಾ ಗ್ರಾಮ ಪಂಚಾಯತಿ ಸಮಗ್ರ ಅಭಿವೃದ್ಧಿ ಮಾಡಲು ಕಾಯಕ ಯೋಜನೆ ರಾಜ್ಯ ಸರ್ಕಾರ ಘೋಷಿಸಿದ್ದು

ಹಾಗೂ ಉಚಿತ ನೇತ್ರ ತಪಸಣೆ ಸಾವ ರ್ಜನಿಕರು ಸ ದ ಉ ಪ ಂ ೕ ೀ ಗ ಪಡೆಸಿಕೊಳ್ಳಲು ಕರೆ ನೀಡಿದರು ಅಧ್ಯಕ್ಷತೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹೇಶ್ ಸಾಹುಕಾರ್ ಸಾವುರ ವಹಿಸಿದರು ಜ್ಯೋತಿ ಬೆಳಗಿಸಿದ ಗ್ರಾಮ ಪಂಚಾಯಿತಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಮರೆಪ್ಪ ಬೇಗಾರ ಡಾಕ್ಟರ್ ಶ್ರೀಮತಿ ನವಿತಾ ರೆಡ್ಡಿ ವೇದ ಆಸ್ಪತ್ರೆ ಡಾ. ನಾಗೇಂದ್ರ ರೆಡ್ಡಿ ಗ್ರಾಮ ಪಂಚಾಯಿತಿ ಸದಸ್ಯರಾದ ಪ್ರಲ್ಹಾದರಾವ ಕುಲಕರ್ಣಿ ನಿಂಗಣ್ಣ ಕೌವಲಿ ಈ ಸಂದಭರ್ದಲ್ಲಿ ಗ್ರಾಮ ಪಂಚಾಯತ್ ಸಿಬ್ಬಂದಿಗಳೆಲ್ಲ ಗೋಪಿನಾಥ್ ಗೋಗಿ ಸಂಜು ಕುಮಾರ ಪರಸಾಪುರ ಸಾದೇವ್ ತಳಗೇರಿ ನರಸಪ್ಪ ಪರಸಾಪುರ್ ಮುದಕಪ್ಪ ಸಾವುರ ಶರಬಣ್ಣ ನಂದಳ್ಳಿ ಬೀರನೂರ್ ಗ್ರಾಮ ಪಂಚಾಯತಿ ವ್ಯಾಪ್ತಿ ಪರಸಾಪೂರ್ ಸಾವೂರ್ ಕಾಟ ಮಳ್ಳಿ ನಂದಳ್ಳಿ ಗ್ರಾಮದ ಸಾರ್ವಜನಿಕರು ಭಾಗವಹಿಸಿ ಕಾಯರ್ಕ್ರಮ ಯಶಸ್ವಿಗೊಳಿಸಿದರು

ಇದೇ ಸಂದರ್ಭದಲ್ಲಿ ಉಚಿತ ನೇತ್ರ ಚಿಕಿತ್ಸೆ ಶಿಬಿರದಲ್ಲಿ 200 ರಿಂದ 300 ಜನ ಭಾಗವಹಿಸಿ ಯೋಜನೆ ಸದುಪಯೋಗ ಪಡಿಸಿಕೊಂಡರು ಹಣಮಂತ ಹಿರೇಮೇಟಿ ದೇವಪ್ಪ ಬೇಗಾರ್ ಗರಡ ಪ್ಪ ಹಿರೇಮೇಟಿ ಶರಣಪ್ಪ ಹಾಲಬಾಯಿ ದೇವಪ್ಪ ಚಿಕ್ಕಮೇಟಿ ನಿಂಗಪ್ಪ ಹತ್ತಿಗುಡುರ್ ಭೀಮರಾಯ ರಾಮೋಜಿ ಶರಣಪ್ಪ ರಾಮೋಜಿ ಲಚಮಪ್ಪ ಹಿರೇಮೇಟಿ ಲಚಮಪ್ಪ ಬೇಗಾರ್ ಚಂದಪ್ಪ ಕುರು ಕುಂದಿ ಭೀಮಪ್ಪ ಅಂದೇಲಿ ಸೇರಿದಂತೆ ಅನೇಕರು ಇದ್ದರು

# ಶರಣಬಸವ ವಿಶ್ವವಿದ್ಯಾಲಯದಲ್ಲಿ ರಕ್ತದಾನ ಶಿಬಿರ ಮತ್ತು ಸಸಿ ನೆಡುವ ಕಾರ್ಯಕ್ರಮ ಉದ್ಘಾಟನೆ

ಕಲಬುರಗಿ;ನ.13: ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿ ಲಿಂಗೈಕ್ಯ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಅವರ 91ನೇ ಜನ್ಮ ದಿನಾಚರಣೆ, ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ ಮತ್ತು ಸಂಸ್ಥಾನದ 9ನೇ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪ ಅವರ ಜನ್ಮದಿನಾಚರಣೆಯ ಅಂಗವಾಗಿ, ವ್ಯವಹಾರ ಅಧ್ಯಯನ ನಿಕಾಯ ಮತ್ತು ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗ (ಸಹ–ಶಿಕ್ಷಣ)ದ ವತಿಯಿಂದ ಗುರುವಾರದಂದು ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯದ ಮುಖ್ಯ ಆವರಣದಾದ್ಯಂತ ಸಸಿ ನೆಡುವ ಕಾರ್ಯಕ್ರಮ ಹಾಗೂ ಸಾಮೂಹಿಕ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.

ದೊಡ್ಡಪ್ಪ ಅಪ್ಪಾ ಸಭಾಂಗಣದಲ್ಲಿ ವ್ಯವಹಾರ ಅಧ್ಯಯನ ನಿಕಾಯ ಆಯೋಜಿಸಿದ್ದ ರಕ್ತದಾನ ಶಿಬಿರದ ಉದ್ಘಾಟನೆಯಲ್ಲಿ ಉಪಕುಲಪತಿ ಪ್ರೊ.ಅನಿಲಕುಮಾರ ಬಿಡವೆ, ಕುಲಸಚಿವ ಡಾ. ಎಸ್. ಜಿ. ಡೊಳ್ಳೇಗೌಡರ್, ಕುಲಸಚಿವ (ಮೌಲ್ಯಮಾಪನ) ಡಾ. ಎಸ್. ಎಚ್. ಹೊನ್ನಳ್ಳಿ, ಹಣಕಾಸು ಅಧಿಕಾರಿ ಪ್ರೊ. ಕಿರಣ್ ಮಾಕಾ ನೇತೃತ್ವದಲ್ಲಿ ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಗಳು ಶಿಬಿರದಲ್ಲಿ ಭಾಗವಹಿಸಿದ್ದರು.

ಬಸವೇಶ್ವರ ಬೋಧನೆ ಮತ್ತು ಜನರಲ್ ಆಸ್ಪತ್ರೆಯ ವೈದ್ಯರು ಹಾಗೂ ಅವರ ಪ್ಯಾರಾಮೆಡಿಕಲ್ ಸಿಬ್ಬಂದಿ ರಕ್ತದಾನ ಶಿಬಿರದ ಭಾಗವಾಗಿದ್ದರು. ವಿವಿಯ ವಿವಿಧ ವಿಭಾಗಗಳ 150 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಶಿಬಿರದಲ್ಲಿ ಭಾಗವಹಿಸಿ ರಕ್ತದಾನ ಮಾಡಿದರು, ಇದನ್ನು ಬಸವೇಶ್ವರ ಬೋಧನೆ ಮತ್ತು ಜನರಲ್ ಆಸ್ಪತ್ರೆಯಲ್ಲಿ ಬಳಸಲಾಗುವುದು.

ನಂತರ, ಶರಣಬಸವ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರೊ.ಬಿಡವೆ, ಡಾ. ಡೊಳ್ಳೇಗೌಡರ್ ವೇಗವಾಗಿ ಬೆಳೆಯುವ "ಕೋನಾ ಕಾಪರ್ಸ್" ವಿಧದ ಸಾಮೂಹಿಕ ಮರದ ಸಸಿಯನ್ನು ನೆಡುವ ಮೂಲಕ ಸಸಿ ನೆಡುವ ಕಾಯರ್ಕ್ರಮವನ್ನು ಉದ್ಘಾಟಿಸಿದರು,

ಈ ಸಸಿ ಬೆಳೆದು ಹೆಮ್ಮರವಾಗಿ ನೆರಳು ಮತ್ತು ವಿವಿಧ ವಿಧದ ಪಕ್ಷಿಗಳಿಗೆ ಆಶ್ರಯವನ್ನು ನೀಡುತ್ತದೆ. ಪೂಜ್ಯ ಡಾ. ಅಪ್ಪಾಜಿಯವರ 91ನೇ ಜನ್ಮವಾರ್ಷಿಕೋತ್ಸವದ ಆಚರಣೆಯನ್ನು ಗುರುತಿಸಲು ಸಾಂಕೇತಿಕವಾಗಿ ಮುಖ್ಯ ಕ್ಯಾಂಪಸ್ ಮತ್ತು ಇತರ ಸ್ಥಳಗಳಲ್ಲಿ ಸುತ್ತಲೂ 91 ಮರದ ಸಸಿಗಳನ್ನು ನೆಡಲಾಯಿತು.




# ಅತೀಂದ್ರಯವಾದ ಪರಮಾತ್ಮನ ಅನುಭೂತಿಯೇ ಅನುಭಾವ

ಕಲಬುರಗಿ:ನ.14: ಅನುಭವ ಇಂದ್ರಿಯಗಳಿಗೆ ಗೋಚರವಾಗುತ್ತಿದ್ದು ಅದನ್ನು ವ್ಯಕ್ತಪಡಿಸಬಹುದು. ಆದರೆ ಅಂತರಂಗದಲ್ಲಿ ಸ್ಥಾಪಿತಗೊಂಡ ಅತೀಂದ್ರಿಯವಾದ ಪರಮಾತ್ಮನ ಅನುಭೂತಿಯೇ ಅನುಭಾವ ಎಂದು ಕಾಶಿ ಜ್ಞಾನ ಪೀಠದ ಶ್ರೀಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.ಅವರು ಕರ್ನಾಟಕದ ಗಡಿ ಮಹಾರಾಷ್ಟ್ರದ ಸೊಲ್ಲಾಪೂರ ನಗರದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದ ಕಾಶಿ ಜ್ಞಾನ ಪೀಠದ ಶ್ರೀಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ 'ಶ್ರೀಕಾಶಿ ವಿಶ್ವಾರಾಧ್ಯ ಸಂತ ಸಾಹಿತ್ಯ ಸಂಶೋಧನಾ ಕೇಂದ್ರ'ದ ಲೋಕಾರ್ಪಣೆ ಸಮಾರಂಭದ ಸಾನ್ನಿಧ್ಯವಹಿಸಿ ಮಾತನಾಡುತ್ತಿದ್ದರು. ಅನುಭಾವವೆಂಬುದು ಸಾಧಕನು ತನ್ನ ಸಾಧನೆಯ ಸಿದ್ಧಿಯ ಶಿಖರದಲ್ಲಿ ಅವನ ಅನುಭವಕ್ಕೆ ಮಾತ್ರ ವೇದ್ಯವಾಗುವ ಒಂದು ಬಗೆಯ ಮಾನಸಿಕ ಸ್ಥಿತಿ ಎಂದರು.

ಉನ್ನತ ಅನುಭಾವದ ಮೂಲಕ ಲಭಿಸುವ ವಿಶಿಷ್ಟ ಆನಂದವನ್ನು ಆನಂದಾನುಭೂತಿ ಎಂದೂ ಕರೆಯುತ್ತಾರೆ. ಅನುಭಾವದ ಮೇರು



ಸ್ಥಿತಿಗೆ ತಲುಪಿದ ಮಾನವನು ಯುಕ್ತ ಚಿಂತನೆಯೊ0ದಿಗೆ ಹುಟ್ಟು–ಸಾವುಗಳ ಗತಿಚಕ್ರದ ದ್ವಂದ್ವತೆಯಿ0ದ ಮುಕ್ತಗೊಂಡು ಮುಕ್ತಿಯ ತನ್ಮಯತೆಯಲ್ಲಿ ಬಯಲ ಬೆಳಗನ್ನು ದರ್ಶಿಸಿ ಧನ್ಯತೆಯನ್ನು ಹೊಂದುತ್ತಾನೆ. ಇಂದ್ರಿಯಾತೀತವಾದ ಈ ವಿಶಿಷ್ಟ ಅನುಭಾವದ ಮೂಲಕವೇ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ ಎಂದೂ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಸಂಶೋಧನಾ ಕೇಂದ್ರವನ್ನು ಲೋಕಾರ್ಪಣೆಗೊಳಿಸಿದ ಉಜ್ಜಯಿನಿ ಸದ್ಧರ್ಮ ಪೀಠದ ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದರು ಆಶೀರ್ವಚನ ನೀಡಿ, ದೇವಭೂಮಿಯಾಗಿರುವ ಭಾರತದಲ್ಲಿರುವ ಹಲವಾರು ಭಾಷೆಗಳ ವಿಭಿನ್ನ ಸಂಪ್ರದಾಯ ಪರಂಪರೆಗಳ ಅನೇಕ ಆಚಾರ್ಯರು, ಸಂತರು, ಮಹಾಂತರು, ಶರಣರು, ಶಿವಯೋಗಿ ವರೇಣ್ಯರು, ಮಹಾತ್ಮರು ಉಲಿದು ದಾಖಲಿಸಿದ ಅನಂತ ಅನುಭಾವದ ನುಡಿಸಿಂಚನದ ವ್ಯಾಪಕ ಸಂಶೋಧನೆಗೆ ಈ ಕೇಂದ್ರ ತೆರೆದುಕೊಳ್ಳುತ್ತಿರುವುದು ಅಖಂಡ ವಿಶ್ವದಲ್ಲಿಯೇ ಹೊಸ ದಾಖಲೆಯಾಗಿ ಗಮನಸೆಳೆದಿದೆ.

ಅತಿ ಹೆಚ್ಚು ಕಾಲ ಸೊಲ್ಲಾಪುರದಲ್ಲಿದ್ದುಕೊಂಡೇ ನಿರಂತರ ಅಧ್ಯಯನದ ಮೂಲಕ ಅಪಾರ ಪಾಂಡಿತ್ಯವನ್ನು ಸಂಪಾದಿಸಿರುವ ಕಾಶಿ ಜ್ಞಾನ ಪೀಠದ ಶ್ರೀಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಪ್ರಸ್ತುತ 36 ನೆಯ ತಮ್ಮ ಪೀಠಾರೋಹಣದ ಸ್ಮಾರಕವಾಗಿ ಈ ವಿಶಿಷ್ಟ ಸಂಶೋಧನಾ ಕೇಂದ್ರ ಆರಂಭಿಸಿರುವುದು ಭಾರತದ ಸಮಸ್ತ ಅನುಭಾವಿಗಳ ಗಮನಸೆಳೆದಿದೆ ಎಂದರು.

ಈ ಸಂಶೋಧನಾ ಕೇಂದ್ರದ ಆರಂಭಕ್ಕೆ ಸೊಲ್ಲಾಪೂರ ನಗರದ ಸ್ವಂತದ 3–ಬಿಎಚ್‌ಕೆ ಕಟ್ಟಡವನ್ನೇ ಕಾಶಿ ಪೀಠಕ್ಕೆ ದಾನವಾಡಿರುವ ಖ್ಯಾತ ಹೃದಯ ರೋಗ ತಜ್ಞ ಡಾ. ಶೈಲೇಶ್ ಜಗದೀಶ ಪಾಟೀಲ ಮಾತನಾಡಿ, ಈಗಾಗಲೇ ಭಾರತದ ಮೇಧಾವಿ ಸಂಶೋಧಕರ 2 ಸಾವಿರ ಗ್ರಂಥಗಳನ್ನು ಕೇಂದ್ರದಲ್ಲಿ ಸಂಗ್ರಹಿಸಲಾಗಿದ್ದು, ಕಾಶಿ ಪೀಠದ ಜ್ಞಾನ ಮಂದಿರ ಗ್ರಂಥಾಲಯದ 10 ಸಾವಿರ ಡಿಸಿಟಲ್ ಗ್ರಂಥಗಳನ್ನು ಅವಲೋಕನ ಮಾಡಲೂ ಸಹ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಸೊಲ್ಲಾಪೂರ ಜೋಡಭಾವಿ ಪೇಟೆ ಪಾಟೀಲ ಪ್ಲಾಜಾದ 4 ಮಹಡಿಯಲ್ಲಿರುವ ಈ ಸಂಶೋಧನಾ ಕೇಂದ್ರದ ಮಾಹಿತಿಗಾಗಿ ಡಾ.ಅನಿಲ ಸರ್ಜೆ (ಮೊ. 7038199911) ಅವರನ್ನು ಸಂಪರ್ಕಿಸಬಹುದು ಎಂದರು.

# 6 ತಿಂಗಳ ಕಾಲ ಕಾರ್ಮಿಕರ ದಾಖಲಾತಿ ಅಭಿಯಾನ:ಪಿ.ಎಫ್ ಯೋಜನೆಗೆ ಇದೂವರೆಗೆ ಒಳಗಾಗದವರಿಗೆ ಸುವರ್ಣಾವಕಾಶ:ಎಂ.ಸುಬ್ರಮಣ್ಯಮ್

ಕಲಬುರಗಿ,ನ.14: ಇ.ಪಿ.ಎಫ್ ವ್ಯಾಪ್ತಿಯಿಂದ ಹೊರಗುಳಿದ ಅರ್ಹ ಉದ್ಯೋಗಿಗಳನ್ನು ಸ್ವಯಂ ಪ್ರೇರಣೆಯಿಂದ ದಾಖಲಿಸಲು ಉತ್ತೇಜಿಸಲು ಮತ್ತು ಅರ್ಹ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತಾ ವ್ಯಾಪ್ತಿಗೆ ತರುವ ನಿಟ್ಟಿನಲ್ಲಿ ಇದೇ ನವೆಂಬರ್ 1 ರಿಂದ 2026ರ ಏಪ್ರಿಲ್ 30ರ ವರೆಗೆ 6 ತಿಂಗಳ ಕಾಲ ಉದ್ಯೋಗದಾತರು ಕಾರ್ಮಿಕರನ್ನು ನೊಂದಾಯಿಸಲು ಸುವರ್ಣಾವಕಾಶ ಕಲ್ಪಿಸಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಸಾಮಾನ್ಯ ಭವಿಷ್ಯ ನಿಧಿ ಕಚೇರಿಯ ಕಲಬುರಗಿ ಪ್ರಾಂತೀಯ ಆಯುಕ್ತ ಎಂ. ಸುಬ್ರಮಣ್ಯಮ್ ಹೇಳಿದರು.

ಬುಧವಾರ ತಮ್ಮ ಕಚೇರಿಯಲ್ಲಿ ಕರೆಯಲಾದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2017ರ ಜುಲೈ 1 ರಿಂದ 2025ರ ಅಕ್ಟೋಬರ್ 31ರ ವರೆಗೆ ಕೆಲಸಕ್ಕೆ ಸೇರಿದ ಕಾರ್ಮಿಕರನ್ನು ಪಿ.ಎಫ್. ವ್ಯಾಪ್ತಿಗೆ ಸೇರಿಸದ ಪ್ರಕರಣಗಳಲ್ಲಿ (ನೌಕರರ ವಂತಿಗೆ ಪಡೆಯದ) ಅಂತಹ ನೌಕರರನ್ನು ಇ.ಪಿ.ಎಫ್.ಓ. ಕಚೇರಿಯಲ್ಲಿ ನೊಂದಾಯಿತ ಉದ್ಯೋಗದಾತರು ಈ 6 ತಿಂಗಳ ಕಾಲದ ವಿಶೇಷ ದಾಖಲಾತಿ ಅಭಿಯಾನದಲ್ಲಿ ಕೇವಲ 100 ರೂ. ದಂಡ ಪಾವತಿ ಮತ್ತು ಸಂಸ್ಥೆ ಪಾಲಿನ ಹಣ ಭರಿಸಿ ನೋಂದಾಯಿಸಬಹುದಾಗಿದೆ. ನೌಕರರನ್ನು ಸಾಮಾಜಿಕ ಭದ್ರತೆ ವ್ಯಾಪ್ತಿಗೆ ತರುವ ಉದ್ದೇಶದಿಂದ ಕಂಪನಿಗಳಿಗೆ ಯಾವುದೇ ಹೆಚ್ಚಿನ ದಂಡ ಶುಲ್ಕ ವಿಧಿಸುತ್ತಿಲ್ಲ. ಕಂಪನಿಗಳು ಇದರ ಲಾಭ ಪಡೆಯಬೇಕು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕಲಬುರಗಿ, ಬೀದರ, ಯಾದಗಿರಿ, ವಿಜಯಪುರ ಜಿಲ್ಲೆಗಳಲ್ಲಿ ಬಹುತೇಕ ಕಂಪನಿಗಳು ತಮ್ಮಲ್ಲಿನ ನೌಕರರನ್ನು ಪಿ.ಎಫ್. ವ್ಯಾಪ್ತಿಗೆ ಒಳಪಡಿಸಿರುವುದಿಲ್ಲ. ಇದರಿಂದ ನೌಕರರಿಗೆ ಸರ್ಕಾರದಿಂದ ಸಿಗಬಹುದಾದ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅರ್ಹರಿಗೆ ಕಾರ್ಮಿಕ ಸೌಲಭ್ಯ ದೊಕಿಸಲು ಉದ್ಯೋಗದಾತರು ಹೆಚ್ಚು ಮತುವರ್ಜಿ ವಹಿಸಿ ನೊಂದಣಿ ಅಭಿಯಾನ ಯಶಸ್ವಿಗೊಳಿಸಬೇಕು. ಇನ್ನು ಕೇಂದ್ರ ಸರ್ಕಾರ ಕಾರ್ಮಿಕ ವರ್ಗಕ್ಕೆ ಹತ್ತಾರು ಯೋಜನೆಗಳು ಜಾರಿಗೊಳಿಸುತ್ತಿದ್ದು, ಇದರ ಲಾಭ ಪಡೆಯಲು ಇ.ಪಿ.ಎಫ್.ಓ. ಕಚೇರಿಯಲ್ಲಿ ನೊಂದಾಯಿತ ಪ್ರತಿಯೊಂದು ಸಂಸ್ಥೆ ತಮ್ಮ ಕಂಪನಿ ವಿವರಗಳನ್ನು ನಮೂನೆ–5ರಲ್ಲಿ ಅಪಡೇಟ್ ಮಾಡಬೇಕು ಎಂದರು.

ಪಿ.ಎಂ.ವಿಕ್ಸಿತ್ ಭಾರತ್ ಯೋಜನೆ ಲಾಭ ಪಡೆಯಲು ಮನವಿ: ಕೇಂದ್ರ ಸರ್ಕಾರವು ಶ್ರಮಿಕ ವರ್ಗ ಮತ್ತು ಉದ್ಯೋಗ ನೀಡುವ ಕಂಪನಿಗಳಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪಿ.ಎಂ.ವಿಕ್ಸಿತ್ ಭಾರತ್ ಯೋಜನೆ ಕಳೆದ ಆಗಸ್ಟ್ 1 ರಿಂದ ಜಾರಿಗೊಳಿಸಿದ್ದು, ಇದರಡಿ ಆಗಸ್ಟ್ 1 ರಿಂದ ಯಾವುದೇ ಐ.ಟಿ.ಐ, ಡಿಪ್ಲೋಮಾ, ಪದವಿ ತೇರ್ಗಡೆಯಾದ ಅಭ್ಯರ್ಥಿ ಯಾವುದೇ ಕಂಪನಿಯಲ್ಲಿ ಮಾಸಿಕ 1 ಲಕ್ಷ ರೂ. ಒಳಗಿನ ವೇತನದ ಕೆಲಸಕ್ಕೆ ಸೇರಿಕೊಂಡು ಅಲ್ಲಿಯೇ ಒಂದು ವರ್ಷ ಸತತವಾಗಿ ಕೆಲಸ ನಿರ್ವಹಿಸಿದಲ್ಲಿ ಗರಿಷ್ಠ 15,000 ರೂ.ಗಳನ್ನು ನೌಕರನಿಗೆ ಸರ್ಕಾರ ಪ್ರೋತ್ಸಾಹ ಧನ ನೀಡಲಿದೆ. ಇನ್ನು ಆರಂಭಿಕ 6 ತಿಂಗಳ ಪೂರ್ಣಗೊಳಿಸಿದ ನಂತದ ಮೊದಲನೇ ಕಂತಿನ ಪ್ರೋತ್ಸಾಹ ಧನ ಸಿಗಲಿದೆ ಎಂದು ಎಂ. ಸುಬ್ರಮಣ್ಯಮ್ ತಿಳಿಸಿದರು.






# ನ.15ರಿಂದ ಎರಡು ದಿನ ಕಾಲಚಕ್ರ ನಾಟಕ ಪ್ರದರ್ಶನ



ಕಲಬುರಗಿ,ನ.14:ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ರಂಗಾಯಣ, ಕಲಬುರಗಿ ವತಿಯಿಂದ ನ.15 ಹಾಗೂ 16ರಂದು ಸಂಜೆ 6ಕ್ಕೆ ನಗರದ ಡಾ.ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಕಾಲಚಕ್ರ ನಾಟಕ ಪ್ರದರ್ಶನ ನಡೆಯಲಿದೆ ಎಂದು ಕಲಬುರಗಿ ರಂಗಾಯಣ ನಿರ್ದೇಶಕಿ ಡಾ.ಸುಜಾತಾ ಜಂಗಮಶೆಟ್ಟಿ ತಿಳಿಸಿದರು.

ಇಲ್ಲಿನ ರಂಗಾಯಣ ಸಭಾಂಗಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ನ.15 ರಂದು 6ಕ್ಕೆ ನಡೆಯಲಿರುವ ಉದ್ಘಾಟನಾ ಸಮಾರಂಭದಲ್ಲಿ ಅಫಜಲಪುರ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ವೈ. ಪಾಟೀಲ್ ಪಾಲ್ಗೊಂಡು ನಾಟಕ ಉದ್ಘಾಟಿಸಲಿದ್ದಾರೆ ಎಂದರು.ಕಲಬುರಗಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದು, ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ಕಲಬುರಗಿ ವೃತ್ತದ ಮುಖ್ಯ ಅರಣ್ಯಾಧಿಕಾರಿ ಡಾ.ಸುನಿಲ್ ಪನ್ವಾರ್, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಪರ ಕಾರ್ಯದರ್ಶಿ ಕು.ಸುರೇಖಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಸವರಾಜ ಹೂಗಾರ, ಕಲಬುರಗಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಡಾ. ಅನಿತಾ ಆರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ ಅ.ನಾಸಿ, ಹಿರಿಯ ಸಾಹಿತಿ ಪ್ರೊ.ಆರ್.ಕೆ.ಹುಡಗಿ, ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಅಧ್ಯಕ್ಷ ಲಕ್ಷ್ಮಣ ದಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಸಿದ್ದರಾಮ ಹೊನ್ಕಲ್, ನ್ಯಾಯವಾದಿ ಹಾಗೂ ಮಹಾತ್ಮಾ ಗಾಂಧೀಜಿ ಗ್ರಾಹಕ ಹಿತರಕ್ಷಣಾ ವೇದಿಕೆ ಪ್ರಧಾನ ಕಾರ್ಯದರ್ಶಿ ವೈಜನಾಥ ಎಸ್.ಝಳಕಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಬಾಬುರಾವ್ ಯಡ್ರಾಮಿ ಹಾಗೂ ಕಾಲಚಕ್ರ ನಾಟಕ ನಿರ್ದೇಶಕ ಹುಲುಗಪ್ಪ ಕಟ್ಟಿಮನಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಜಯಂತ ದಳ್ವಿ ಅವರು ಮರಾಠಿಯಲ್ಲಿ ಬರೆದಿರುವ ನಾಟಕವನ್ನು ಎಚ್.ಕೆ.ಕರ್ಕೇರ ಕನ್ನಡಕ್ಕೆ ಅನುವಾದಿಸಿದ್ದು, ಕಲಬುರಗಿ ರಂಗಾಯಣ ಕಲಾವಿದರು ನಾಟಕ ಪ್ರಸ್ತುಪಡಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ವಯಸ್ಸಾದ ತಾಯಿ–ತಂದೆಯನ್ನು ನಿರ್ಲಕ್ಷಿಸುವ ಮಕ್ಕಳ ಮನಸ್ಥಿತಿ ಮತ್ತು ಆ ನಿಟ್ಟಿನಲ್ಲಿ ವೃದ್ಧ ತಾಯಿ–ತಂದೆ ತೆಗೆದುಕೊಳ್ಳುವ ನಿರ್ಧಾರದ ಕುರಿತಾದ ವಸ್ತು ಒಳಗೊಂಡಿರುವ ಈ ನಾಟಕ ಕುಟುಂಬ ವ್ಯವಸ್ಥೆಯಲ್ಲಿ ತಾಯಿ–ತಂದೆ ಹಾಗೂ ವಯೋವೃದ್ಧ ಹಿರಿಯರ ಮಹತ್ವ ತಿಳಿಯಪಡಿಸುವ ಕಥಾ ಹಂದರ ಒಳಗೊಂಡಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯ ವೇಳೆ ಕಾಲಚಕ್ರ ನಾಟಕದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಬಳಿಕ ಪತ್ರಕರ್ತರಿಗಾಗಿ ರಂಗಾಯಣ ವೇದಿಕೆಯ ಮೇಲೆ 'ಕಾಲಚಕ್ರ' ನಾಟಕ ಪ್ರದರ್ಶನ ನೆರವೇರಿತು.ಕಲಬುರಗಿ ರಂಗಾಯಣದ ಉಪನಿರ್ದೇಶಕಿ ಜಗದೀಶ್ವರಿ ನಾಸಿ ಉಪಸ್ಥಿತರಿದ್ದರು.

# ಉಚಿತ ನೇತ್ರ ತಪಾಸಣೆ ಮತ್ತು ರಕ್ತದಾನ ಶಿಬಿರ 20ಕ್ಕೆ

ಆಳಂದ್:ನ.14:ಸಾಮಾಜಿಕ ಸೇವೆಯ ಮೂಲಕ ಸಮುದಾಯದ ಆರೋಗ್ಯ ಸುಧಾರಣೆಗೆ ಬದ್ಧರಾಗಿರುವ ತೆಹರಿಕ್–ಇ–ಖುದ್ದಾದ್ ಸಂಘಟನೆಯ ಕಲ್ಯಾಣ ಕರ್ನಾಟಕ ಪ್ರದೇಶ ಘಟಕವು, ಆಳಂದ ತಾಲೂಕಿನ ಯುವಕರ ಸಹಯೋಗದೊಂದಿಗೆ ಉಚಿತ ನೇತ್ರ ತಪಾಸಣೆ

ಮತ್ತು ರಕ್ತದಾನ ಶಿಬಿರವನ್ನು ನವೆಂಬರ್ 20 ರಂದು ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯಲಿದ್ದು, ತಾಲೂಕಿನ ಎಲ್ಲರೂ ಸದುಪಯೋಗ ಪಡೆಯಬೇಕೆಂದು ಸಂಘಟನೆಯ ಅಧ್ಯಕ್ಷ ಮಹ್ಮದ್ ರಫಿಕ್ ಮುಲ್ಲಾ ಮನವಿ ಮಾಡಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಫಿಕ್ ಮುಲ್ಲಾ, "ನೇತ್ರ ಆರೋಗ್ಯವು ಜೀವನದ ಮೂಲಭೂತ ಅಂಶವಾಗಿದ್ದು,

ಬಡತನದಿಂದಾಗಿ ಅನೇಕರು ನೇತ್ರ ತಪಾಸಣೆಗೆ ತೆರಳಲಾರರು. ಈ ಶಿಬಿರದ ಮೂಲಕ ನಾವು 500ಕ್ಕೂ ಹೆಚ್ಚು ಜನರಿಗೆ ಉಚಿತ ನೇತ್ರ ತಪಾಸಣೆ, ಮತ್ತು ಅಗತ್ಯವಿದ್ದರೆ ಶಸ್ತ್ರಚಿಕಿತ್ಸೆಗೆ ಸಹಾಯಕವಾಗಿ ಕಾರ್ಯನಿರ್ವಹಿಸುತ್ತೇವೆ. ಹಾಗೂ ರಕ್ತದಾನ ಶಿಬಿರದ ಮೂಲಕ ಆಸ್ಪತ್ರೆಯ ರಕ್ತಸಂಗ್ರಹ ಕೇಂದ್ರವನ್ನು ಬಲಪಡಿಸುತ್ತೇವೆ. ಇದು ಕೇವಲ ಆರೋಗ್ಯ ಸೇವೆಯಲ್ಲ, ಸಾಮಾಜಿಕ ಜವಾಬ್ದಾರಿಯ ಸಂದೇಶವೂ ಹಂಚುತ್ತದೆ" ಎಂದು ಹೇಳಿದರು.

ಆಳಂದ ತಾಲೂಕಿನಲ್ಲಿ ಇದು ಮೊದಲ ಬಾರಿಗೆ ಇಂತಹ ವ್ಯಾಪಕ ಶಿಬಿರವಾಗಿದ್ದು, ಸ್ಥಳೀಯ ಯುವಕರ ಉತ್ಸಾಹದಿಂದಾಗಿ ಇದು ಇನ್ನಷ್ಟು ಯಶಸ್ವಿಯಾಗುವ ನಿರೀಕ್ಷೆಯಿದೆ. ಎಂದು ಅವರು ಹೇಳಿದರು

ಶಿಬಿರದಲ್ಲಿ ಜಿಲ್ಲಾ ಆಸ್ಪತ್ರೆಯ ನೇತ್ರ ರೋಗ ತಜ್ಞರು, ಆಪ್ತ ವೈದ್ಯರು ಮತ್ತು ರಕ್ತದಾನ ತಂಡಗಳು ಭಾಗವಹಿಸಲಿದ್ದು, ಎಲ್ಲಾ ವಯೋವರ್ಗಗಳಿಗೆ ಸೌಲಭ್ಯ ಒದಗಿಸಲಾಗುತ್ತದೆ. "ಪ್ರಭುತ್ವದ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಇದು ನಡೆಯುತ್ತಿದ್ದು, ಜನರಲ್ಲಿ ಆರೋಗ್ಯ ಸದೃಢತೆ ಹೆಚ್ಚಿಸುವ ಗುರಿಯಿದೆ" ಎಂದು ರಫಿಕ್ ಮುಲ್ಲಾ ಸೇರಿದಂತೆ ಸ್ಥಳೀಯ ಸಮಾಜಸೇವಕರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಯುವ ಮುಖಂಡರಾದ ಮಹಾದೇವ ಕಾಂಬಳೆ, ಬಬಲೇಶ್ವರ, ಚಾಂದಪಾಷಾ ಜಮಾದಾರ, ರಫೀಕ್ ಕಿಂಗ್, ಶರಣು ಕುಲಕರ್ಣಿ, ಪರವೇಜ್ ಅನ್ಸಾರಿ, ಸಂದೀಪ ಪಾತ್ರೆ, ಫೈಜುದ್ದೀನ್ ಮುಂಡಾಸಗರ, ಅರಬಾಜ್ ಶೇಖ, ಅಖೀಲ ಪಟೇಲ್, ತಾನಾಜಿ ಲವಟೆ ಮುಂತಾದವರು ಉಪಸ್ಥಿತರಿದ್ದರು.



# ಸರ್ಕಾರಿ ಶಾಲೆಗಳಿಗೆ ಹೈ ಸ್ಪರ್ಶ ಹಾಜರಾತಿ ದ್ವಿಗುಣಗೊಳಿಸಿ: ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಊಡಗಿ



ಸೇಡಂ,ನ,14:ನಮ್ಮ ಸರ್ಕಾರ ಬಡವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಸರ್ಕಾರಿ ಶಾಲೆಗಳನ್ನು ಹೈಟೆಕ್ ಸ್ಪರ್ಶಕೊಟ್ಟು ಎಲ್ಲಾ ಮೂಲಭೂತ ಸೌಕರ್ಯ ಒಳಗೊಂಡ ಸುಸಜ್ಜಿತ ಕಟ್ಟಡ ನಿರ್ಮಿಸಿ ಕೊಡಲಾಗುತ್ತಿದೆ. ಇಲ್ಲಿರುವಂತಹ ಶಿಕ್ಷಕರು ಸರ್ಕಾರಿ ಶಾಲೆಯಲ್ಲಿ ಹೆಚ್ಚಿನ ದಾಖಲಾತಿ ಮಾಡಿಕೊಳ್ಳುವ ಮೂಲಕ ಹಾಜರಾತಿಯ ಸಂಖ್ಯೆ ದ್ವಿಗುಣಗೊಳಿಸಲು ಶಿಕ್ಷಕರು ಪ್ರಮುಖ ಪಾತ್ರ ವಹಿಸಬೇಕೆಂದು ಹೇಳಿದರು.

ತಾಲೂಕಿನ ಕೋಡ್ಲಾ ಗ್ರಾಮದಲ್ಲಿ ಮೂರುವರೆ ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡ 12 ಕೋಣೆಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಕಟ್ಟಡ ಪ್ರಯೋಗಾಲಯ ವಾಚನಾಲಯ ಶೌಚಾಲಯ ಮತ್ತು ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ಸರ್ಕಾರ ಗ್ಯಾರಂಟಿಗಳ ನೀಡುವುದರ ಜೊತೆಗೆ ಅಭಿವೃದ್ಧಿಯ ಕಾರ್ಯಗಳಿಗೆ ಕುಂಠಿತವಾಗಿಲ್ಲ ಎಂಬುದು ವಿರೋಧ ಪಕ್ಷದ ನಾಯಕರು ಅರಿತುಕೊಳ್ಳಬೇಕು ಅನವಶ್ಯಕವಾಗಿ ಗ್ಯಾರೆಂಟಿಗಳಿಂದ ಅಭಿವೃದ್ಧಿ ಕುಂಠಿತಗೊಳ್ಳುತ್ತಿದೆ ಎಂಬುದು ವಿಪರ್ಯಾಸದ ಸಂಗತಿ ಎಂದರು, ಗ್ರಾಮದ ಹಿರಿಯರಾದ ಶಂಭುರೆಡ್ಡಿ ಮದನಿ, ಪರ್ವತರೆಡ್ಡಿ ನಾಮವರ, ಸತೀಶ್ ರೆಡ್ಡಿ ಪಾಟೀಲ್, ಮಾತನಾಡಿದರು. ಶಾಲೆಯ ಮುಖ್ಯ ಶಿಕ್ಷಕರಾದ ಮುಡುಬಿ ಗುಂಡೇರವರು ಪ್ರಾಸ್ತಾವಿಕ ಮಾತನಾಡಿದರು. ರವಿ ಸಾಹು ತಂಬಾಕೆ ಸ್ವಾಗತಿಸಿದರು.

ಈ ವೇಳೆಯಲ್ಲಿ ರಾಜ್ಯ ತೋಟಗಾರಿಕೆ ಮಹಾಮಂಡಳಿಯ ಮಾಜಿ ರಾಜ್ಯಾಧ್ಯಕ್ಷರಾದ ಬಸವರಾಜ ಪಾಟೀಲ್ ಊಡಗಿ,

ಸಹಾಯಕ ಉಪ ವಿಭಾಗಾಧಿಕಾರಿ ಪ್ರಭುರೆಡ್ಡಿ ತಹಸಿಲ್ದಾರ್ ಶ್ರೀಮತಿ ಶ್ರೀಯಾಂಕ್ ಧನಶ್ರೀ, ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಲಕ್ಷ್ಮಿ ಮಾರುತಿ, ರವೀಂದ್ರ ನಂದಿಗಾಮ್, ಗ್ಯಾರಂಟಿ ಅನುಷ್ಠಾನದ ತಾಲೂಕ ಅಧ್ಯಕ್ಷ ಶಿವಶರಣ ರೆಡ್ಡಿ ಪಾಟೀಲ್,

ಎಸ್ ಸಿ ಘಟಕದ ಅಧ್ಯಕ್ಷರಾದ ಜಗನಾಥ್ ಚಿಂತಪಳ್ಳಿ, ಜೈ ಭೀಮ್ ಊಡಗಿ, ಎಪಿಎಂಸಿಯ ಮಾಜಿ ಉಪಾಧ್ಯಕ್ಷರಾದ ವಿಶ್ವನಾಥ್ ಪಾಟೀಲ್, ಸಿದ್ದು ಬಾನರ್, ಕ್ಷೇತ್ರ ಶಿಕ್ಷಣಾಧಿಕಾರಿ ಮಾರುತಿ ಹುಜರಾತಿ ಇಓ ಚನ್ನಪ್ಪ ರಾಯಣ್ಣನವರ ಸಿಪಿಐ ಮಹಾದೇವ ದಿಡ್ಡಿಮನಿ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ದುರ್ಬಲ ವರ್ಗಗಳಿಗೆ ನ್ಯಾಯ ಸೇವೆ ಸದಾ ಸಿದ್ಧ: ಸುಮನ್ ಚಿತ್ತರಗಿ

ಆಳಂದ:ನ.14:ದುರ್ಬಲ ವರ್ಗಗಳಿಗೆ ರಾಷ್ಟ್ರೀಯ ಕಾನೂನು ಸೇವಾ ಸಮಿತಿಯ ಮೂಲಕ ಉಚಿತ ಸಲಹೆ, ಮಧ್ಯಸ್ಥಿ ಮತ್ತು ಕಾನೂನು ಸಹಾಯವನ್ನು ಎಲ್ಲರಿಗೂ ಒದಗಿಲಾಗುತ್ತಿದೆ ಇದರ ಸದ್ಬಳಕೆಯನ್ನು ಮಾಡಿಕೊಳ್ಳಬೇಕು ಎಂದು ಜೆಎಂಎಫ್‌ಸಿ ಪ್ರಧಾನ ಸಿವಿಲ್ ನ್ಯಾಯಾಧೀಶೆ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಕುಮಾರಿ ಸುಮನ್ ಚಿತ್ತರಗಿ ಅವರು ಹೇಳಿದರು.

ಪಟ್ಟಣದ ನ್ಯಾಯಾಲಯದಲ್ಲಿ ಬುಧವಾರ ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ ಮತ್ತು ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಈ ಕಾರ್ಯಕ್ರಮದ ಮೂಲಕ ದುರ್ಬಲ ಮತ್ತು ಆರ್ಥಿಕವಾಗಿ ದುರ್ಬಲರಿಗೆ ಉಚಿತ ಕಾನೂನು ಸೇವೆಯ ಮಹತ್ವವನ್ನು ಜನರಿಗೆ ತಿಳಿಸುವ ಗುರಿ ಹೊಂದಿತ್ತು. ನ್ಯಾಯವು ಸಮಾನತೆಯ ಮೂಲಸ್ತಂಭ. ಆದರೆ ದುರ್ಬಲ ವರ್ಗಗಳು ಆರ್ಥಿಕ ಕೊರತೆಯಿಂದಾಗಿ ನ್ಯಾಯ ಸೇವೆಯಿಂದ ವಂಚಿತರಾಗುತ್ತಿದ್ದಾರೆ.

ಈ ಸಂಸ್ಥೆಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಜಾಗೃತಿ ಮೂಡಿಸುವಲ್ಲಿ ಮುಖ್ಯ ಪಾತ್ರ ವಹಿಸಬೇಕು" ಎಂದು ಹೇಳಿದರು.

ಕಾನೂನು ಸೇವಾ ಸಮಿತಿಯ ಮೂಲಕ ಎಲ್ಲಡೆ ನಡೆದಿರುವ ಅನೇಕ ಕೇಸ್‌ಗಳಲ್ಲಿ ದುರ್ಬಲರಿಗೆ ನ್ಯಾಯ ಒದಗಿಸಲಾಗಿದ್ದು, ಇಂತಹ ಕಾರ್ಯಕ್ರಮಗಳು ಸಾಮಾಜಿಕ ನ್ಯಾಯಕ್ಕೆ ದಾರಿ ಮಾಡಿಕೊಡುತ್ತವೆ ಎಂದೂ ತಿಳಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ನ್ಯಾಯವಾದಿ ದೇವಾನಂದ ಹೋದಲೂರಕರ್ ಅವರು ಮಾತನಾಡಿ, "ಕಾನೂನು ಸೇವೆಯು ಸಾಮಾಜಿಕ ಸಮಾನತೆಗೆ ಅಡಿಗಲ್ಲು. ಮಹಿಳೆಯರು, ದಲಿತರು ಮತ್ತು ಕಾರ್ಮಿಕರಂತಹ ವರ್ಗಗಳು ತಮ್ಮ ಹಕ್ಕುಗಳನ್ನು ತಿಳಿದುಕೊಂಡು ಅದನ್ನು ಬಳಸಿಕೊಳ್ಳಬೇಕು. ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಪ್ರಧಾನ ಸಿವಿಲ್ ನ್ಯಾಯಾಲಯದ ಸಹಾಯಕ ಸರಕಾರಿ ಅಭಿಯೋಜಕ ಇಸ್ಮಾಯಿಲ್ ಪಟೇಲ್ ಮತ್ತು ಅಪರ್ ಸಿವಿಲ್ ನ್ಯಾಯಾಲಯದ ಸಹಾಯಕ ಸರಕಾರಿ ಅಭಿಯೋಜಕ ಜ್ಯೋತಿ ವಿ. ಬಂದಿ ಅವರು, "ಡಿಜಿಟಲ್ ಯುಗದಲ್ಲಿ ಕಾನೂನು ಸೇವೆಯನ್ನು ಆನ್‌ಲೈನ್ ಪೋರ್ಟಲ್‌ಗಳ ಮೂಲಕ ಒದಗಿಸುವುದು ಅಗತ್ಯ. ಇದರಿಂದ ಗ್ರಾಮೀಣ ಜನರಿಗೆ ಸುಲಭವಾಗುತ್ತದೆ" ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ನ್ಯಾಯವಾದಿಗಳ ಸಂಘದ ಕಾರ್ಯದರ್ಶಿ ಬಲಭೀಮ್ ಟಿ. ಶಿಂಧೆ ಅವರು, "ನ್ಯಾಯವಾದಿಗಳು ಕೇವಲ ಕೋ?????ರೂ???ನಲ್ಲೇ ಸೀಮಿತವಾಗಿರಬಾರದು. ಸಮಾಜದ ಕೊನೆಯ ಗುಂಪಿನವರಿಗೆ ಸಹಾಯ ಮಾಡುವುದು ನಮ್ಮ ಧರ್ಮ. ಈ ದಿನಾಚರಣೆಯ ಮೂಲಕ ನಾವು ಜನರಲ್ಲಿ ಕಾನೂನು ಜಾಗೃತಿ ಮೂಡಿಸುತ್ತಿದ್ದೇವೆ ಎಂದರು.

ನ್ಯಾಯವಾದಿ ಮಹಾದೇವ ಹತ್ತಿ ನಿರೂಪಿಸಿದರು. ನ್ಯಾಯವಾದಿ ನಾಗರಾಜ್ ದೇಕುನ ವಂದಿಸಿದರು. ಕಾರ್ಯಕ್ರಮದಲ್ಲಿ ನ್ಯಾಯವಾದಿಗಳು, ಕಕ್ಷಿದಾರರು ಉಪಸ್ಥಿತರಿದ್ದರು.












# ಬೆಳೆ ಪರಿಹಾರ, ಸಾಲ ಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಧರಣಿ ಸತ್ಯಾಗ್ರಹ



ಆಳಂದ:ನ.14:ತಾಲೂಕಿನ ರೈತರು ತಮ್ಮ ಹಕ್ಕು ಹಾಗೂ ಹಿತಕ್ಕಾಗಿ ಬೀದಿಗಿಳಿದಿದ್ದಾರೆ. ಅಖಿಲ ಭಾರತ ಕಿಸಾನ್ ಸಭಾ ಹಾಗೂ ಖೇತ ಮಜದೂರ ಸಂಘಟನೆಗಳ ಆಶ್ರಯದಲ್ಲಿ ಮಟಕಿ ಗ್ರಾಮದಿಂದ ಆಳಂದವರೆಗೆ ಪಾದಯಾತ್ರೆ ನಡೆಸಿ, ತಾಲೂಕು ಪಂಚಾಯತ ಕಚೇರಿಯ ಮುಂದೆ ಅನಿರ್ಧಿಷ್ಠಾವಧಿ ಧರಣಿ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ.

ಬೆಳೆ ನಷ್ಟಕ್ಕೆ ಪರಿಹಾರ ನೀಡುವುದು, ಬೆಳೆ ವಿಮೆ ಮೊತ್ತ ಬಿಡುಗೆ ಮಾಡುವುದು, ರೈತರ ಸಾಲ ಮನ್ನಾ ಮಾಡುವುದು, ದನದ ಕೊಟ್ಟಿಗೆ ಹಾಗೂ ಕುರಿ ದೊಡ್ಡಿ ನಿರ್ಮಾಣ ಮಾಡಬೇಕು ಎಂಬುದು ಅವರ ಪ್ರಮುಖ ಬೇಡಿಕೆ. ಜೊತೆಗೆ ಖಜೂರಿ ವಲಯದ ಮಟಕಿ, ಖಂಡಾಳ, ಖಜೂರಿ ಸೇರಿ ಒಟ್ಟು 25 ಕಡೆಗಳಲ್ಲಿ ಬ್ರೀಜ್ ಕಂ ಬ್ಯಾರೇಜ್ ನಿರ್ಮಾಣ ಹಾಗೂ "ನಮ್ಮ ಹೊಲ ನಮ್ಮ ರಸ್ತೆ" ಯೋಜನೆಗೆ ತ್ವರಿತ ಕಾರ್ಯಾರಂಭ ಮಾಡುವಂತೆ ಒತ್ತಾಯಿಸಿದ್ದಾರೆ.

ಸುಮಾರು 9 ಕಿ.ಮೀ ದೂರದ ಮಟಕಿ ಗ್ರಾಮದಿಂದ ಪಾದಯಾತ್ರೆ ನಡೆಸಿದ ರೈತರು ಆಳಂದ ತಾಪಂ ಕಚೇರಿಯ ಮುಂದೆ ತಲುಪಿದ ನಂತರ ಸತ್ಯಾಗ್ರಹ ಧರಣಿ ಆರಂಭಿಸಿದರು. ಪ್ರತಿಭಟನೆಯಲ್ಲಿ ಭಾಗವಹಿಸಿದವರು ತಮ್ಮ ಬೇಡಿಕೆಗಳ ಕುರಿತು ಘೋಷಣೆ ಕೂಗುತ್ತಾ ಸರ್ಕಾರದ ನಿರ್ಲಕ್ಷ್ಯವನ್ನು ತೀವ್ರವಾಗಿ ಖಂಡಿಸಿದರು.

ಈ ಧರಣಿಯಲ್ಲಿ ಕಿಸಾನ್ ಸಭಾ ರಾಜ್ಯ ಕಾರ್ಯದರ್ಶಿ, ತಾಲೂಕು ಅಧ್ಯಕ್ಷ ಚಂದ್ರಕಾಂತ ಖೋಬ್ರೆ, ರಾಜಶೇಖರ ಬಸ್ಮೆ, ಆಶ್ಫಾಕ್ ಮುಲ್ಲಾ, ತಡೋಳಾ ಗ್ರಾಪಂ ಮಾಜಿ ಅಧ್ಯಕ್ಷ ಮೈಲಾರಿ ಜೋಗೆ, ರೈತ ಕಲ್ಯಾಣಿ ಅವುಟೆ, ಗೋವಿಂದ ಗಾಯಕವಾಡ, ಮಹಾದೇವ ಪೂಜಾರಿ (ಮಟಕಿ), ತ್ರೀಮುಖ ಸಿಂಧೆ, ವೆಂಕಟರಾವ್ ತಡೋಳಾ, ಮನೋಜ ಗಾವಡೆ, ಕಮಲೇಶ ಸಗರ, ಭಗವಾನ್ ಪಾಟೀಲ,

ರತನಚಂದ ಕಲ ಶೆಟ್ಟಿ, ಸಾತಣ್ಣಾ ಜವಾದಾರ, ಜನಾಬಾಯಿ ಚವ್ಹಾಣ, ಗುರುಬಾಯಿ ಚವ್ಹಾಣ, ಕಬೀರಾ ಬೇಗಂ ಸೇರಿದಂತೆ ಅನೇಕ ರೈತರು ಭಾಗವಹಿಸಿದರು. ಪ್ರತಿಭಟನಾಕಾರರು ಸರ್ಕಾರವು ತಕ್ಷಣ ಅವರ ಬೇಡಿಕೆಗಳನ್ನು ಪರಿಗಣಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವ ಎಚ್ಚರಿಕೆಯನ್ನು ನೀಡಿದ್ದಾರೆ.

# ಇಂಗಳಗಿ ಶಾಲೆಯಲ್ಲಿ ಪ್ರತಿಭಾ ಕಾರಂಜಿ

ವಾಡಿ:ನ.14:ಪಟ್ಟಣ ಸಮೀಪದ ಇಂಗಳಗಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಪ್ರತಿಭಾ ಕಾರಂಜಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ವಾಡಿ ಠಾಣಾಧಿಕಾರಿ ಕೆ.ತಿರುಮಲೇಶ, ಕಲೆ ಸಾಹಿತ್ಯ ಸಂಗೀತ ನೃತ್ಯ ಗಾಯನ ಇವು ಕಲಾಪ್ರಕಾರಗಳಾಗಿದ್ದು,

ಪ್ರತಿಯೊಬ್ಬರನ್ನೂ ಆಕರ್ಷಿಸುತ್ತವೆ. ಆದರೆ ಕೆಲವರಲ್ಲಿ ಈ ಮಾತ್ರ ಕಲಾ ಪ್ರತಿಭೆ ಮೈಗೂಡಿರುತ್ತದೆ. ಸರಕಾರ ಮಕ್ಕಳಲ್ಲಿ ಅಡಗಿರುವ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಜಾರಿಗೆ ತಂದಿರುವುದು ಉತ್ತಮ ಕಾರ್ಯವಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳ ಜೀವನ ಸುಂದರವಾಗಿರಲಿದೆ ಎಂದರು.

ಗ್ರಾಪಂ ಅಧ್ಯಕ್ಷೆ ಅನಿತಾ ಮಲ್ಲಪ್ಪ ನಾಟೀಕಾರ ಕಾರ್ಯಕ್ರಮ ಉದ್ಘಾಟಿಸಿದರು. ಪತ್ರಕರ್ತ ಸಾಯಬಣ್ಣ ಗುಡುಬಾ ಮಕ್ಕಳ ಶೈಕ್ಷಣಿಕ ಜೀವನದ ಕುರಿತು ಮಾತನಾಡಿದರು. ಮುಖ್ಯಶಿಕ್ಷಕಿ ಸರಸ್ವತಿ ಮುನಗಲ್ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಶಿಕ್ಷಣ ಸಮನ್ವಯಾಧಿಕಾರಿ ಮಲ್ಲಿಕಾರ್ಜುನ ಸೇಡಂ, ಸಿ ಆರ್ ಪಿ ಅಂಬಾದಾಸ್, ಗ್ರಾಪಂ ಉಪಾಧ್ಯಕ್ಷೆ ದ್ರೌಪದಿ ಶಾಂತಪ್ಪ, ಮಲ್ಲಾರಾವ ಕುಲಕರ್ಣಿ, ಬಸವರಾಜ ಸ್ಥಾವರಮಠ, ಶರಣು ರಾವೂರ, ಮಹ್ಮದ್ ಗೌಸ್ ದುದ್ದನಿ, ಕಾಶಿನಾಥ್ ಚನ್ನಗುಂಡ, ಮಹೇಶ ಕುಮಾರ, ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಛತ್ರು ರಾಥೋಡ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಶರಣಪ್ಪ ಐಕೂರ ಸೇರಿದಂತೆ ಗ್ರಾಮದ ಮುಖಂಡರು, ಪೋಷಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ವಿದ್ಯಾರ್ಥಿನಿ ಭಾಗ್ಯಶ್ರೀ ಸಂಗಡಿಗರು ಪ್ರಾರ್ಥಿಸಿದರು. ಶ್ರೇಯಾ ಹಾಗೂ ಸಂಗಡಿಗರು ಸ್ವಾಗತ ಗೀತೆ ಹಾಡಿದರು. ಶಿಕ್ಷಕ ಬಸಪ್ಪ ಮುಗುಳು ಕೋಡ ಕಾರ್ಯಕ್ರಮ ನಿರೂಪಿಸಿದರು. ರೇವಣಸಿದ್ದಯ್ಯ ಸ್ವಾಮಿ ವಂದಿಸಿದರು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ವಿಜೇತ ವಿದ್ಯಾರ್ಥಿಗಳು ಪ್ರಶಸ್ತಿ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾದರು.



# ರಾಜ್ಯ ಮಟ್ಟದ ಕಲಾಶ್ರೀ ಪ್ರಶಸ್ತಿ ಅಂಗವಾಗಿಜಿಲ್ಲಾ ಮಟ್ಟದ ವಿವಿಧ ಸ್ಪರ್ಧೆಗಳಿಗೆ ಚಾಲನೆ

ಕಲಬುರಗಿ,ನ.14:ರಾಜ್ಯ ಬಾಲ ಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಪಂಚಾಯತ್ ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಲಬುರಗಿ ಹಾಗೂ ಜಿಲ್ಲಾ ಬಾಲ ಭವನ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನ ಜಿಲ್ಲಾ ಮಟ್ಟದ ಮಕ್ಕಳ ದಿನಾಚರಣೆ ಪ್ರಯುಕ್ತ ರಾಜ್ಯ ಮಟ್ಟದ ಕಲಾಶ್ರೀ ಪ್ರಶಸ್ತಿಗಾಗಿ 09 ರಿಂದ 16 ವರ್ಷ ವಯಸ್ಸಿನ ಮಕ್ಕಳಿಗೆ ಜಿಲ್ಲಾಮಟ್ಟದ ವಿವಿಧ ಸ್ಪರ್ಧೆಗಳನ್ನು ಕಲಬುರಗಿಯ ಆಳಂದ ಕಾಲೋನಿಯ ಬಾಲಕಿಯರ ಬಾಲಮಂದಿರದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಯಿತು.



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ, ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಹಾಗೂ ಜಿಲ್ಲಾ ಬಾಲಭವನ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ರಾಜಕುಮಾರ ರಾಠೋಡ ಅವರು, ಜಿಲ್ಲಾಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನವನ್ನು ಪಡೆದು ರಾಜ್ಯ ಮಟ್ಟದಲ್ಲಿಯೂ ಕೂಡಾ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನವನ್ನು ಪಡೆದು ವಿಜೇತರಾಗಿ ಪ್ರಶಸ್ತಿಯನ್ನು ಪಡೆದುಕೊಳ್ಳಬೇಕೆಂದು ಮಕ್ಕಳಿಗೆ ಪ್ರೇರೇಪಿಸಿದರು. ಮಕ್ಕಳು ವಿದ್ಯಾಭ್ಯಾಸದ ಜೊತೆಗೆ ಇಂತಹ ದೈಹಿಕ ಹಾಗೂ ಬೌದ್ಧಿಕ ಚಟುವಟಿಕೆಗಳಲ್ಲಿಯೂ ಭಾಗವಹಿಸುವಂತೆ ಶಿಕ್ಷಕರು ಹಾಗೂ ಪಾಲಕರು ಮಕ್ಕಳಿಗೆ ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ವಿಶ್ವರಾಧ್ಯ ಇಜೇರಿ ಅವರು ಮಾತನಾಡಿ, ಮಕ್ಕಳಲ್ಲಿನ ಕಲೆಯನ್ನು ಗುರುತಿಸಲು ಇಂತಹ ವೇದಿಕೆ ತುಂಬಾ ಸಹಕಾರಿಯಾಗಲಿದೆ. ಇಂತಹ ಕಾರ್ಯಕ್ರಮ ಹಮ್ಮಿಕೊಂಡು ಜಿಲ್ಲಾ ಬಾಲ ಭವನವು ತುಂಬಾ ಒಳ್ಳೆಯ ಕೆಲಸ ಮಾಡುತ್ತಿದೆ. ಇದರಿಂದ ಮಕ್ಕಳ ಸರ್ವೋತ್ತಮ ಬೆಳವಣಿಗೆಗೆ ತುಂಬಾ ಅನುಕೂಲವಾಗಲಿದೆ ಎಂದರು.

ಕಾರ್ಯಕ್ರಮಗಳಲ್ಲಿ ವಿವಿಧ ಸ್ಪರ್ಧೆಗಳಾದ ಸೃಜನಾತ್ಮಕ ಕಲೆ, ಸೃಜನಾತ್ಮಕ ಬರವಣಿಗೆ, ಸೃಜನಾತ್ಮಕ ಪ್ರದರ್ಶನ ಕಲೆ, ವಿಜ್ಞಾನದಲ್ಲಿ ನೂತನ ಆವಿಷ್ಕಾರ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ, ತಾಲ್ಲೂಕಿನ ಹಾಗೂ ಅಂಧ ಮಕ್ಕಳು ಸೇರಿ 150 ಜನ ಮಕ್ಕಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ 08 ಜನ ತೀರ್ಪುಗಾರರು ಭಾಗವಹಿಸಿ, ಸ್ಪರ್ಧೆಗಳಲ್ಲಿ ಭಾಗವಹಿಸಿದ ಉತ್ತಮ ಪ್ರದರ್ಶನ ನೀಡಿದ ಮಕ್ಕಳನ್ನು ಪ್ರಥಮ, ದ್ವಿತೀಯ, ತೃತೀಯ ಹಾಗೂ ಸಮಾಧಾನಕರ ಸ್ಥಾನಗಳಿಗೆ ಆಯ್ಕೆ ಮಾಡಿದರು. ಪ್ರತಿ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನಗಳಿಸಿದ 08 ಮಕ್ಕಳನ್ನು ರಾಜ್ಯ ಮಟ್ಟದಲ್ಲಿ ನಡೆಯುವ ಕಲಾಶ್ರೀ ಪ್ರಶಸ್ತಿ ಶಿಬಿರಕ್ಕೆ ಆಯ್ಕೆ ಮಾಡಲಾಯಿತು.

ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶಿವಶರಣಪ್ಪಾ ಅವರು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನವನ್ನು ವಿತರಿಸಿದರು.

ಈ ಕಾರ್ಯಕ್ರಮದಲ್ಲಿ ಕಲಬುರಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಂ.ಡಿ. ಮಸೂದ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಂಜುಳಾ ಪಾಟೀಲ್, ಕಲಬುರಗಿ ಬಾಲಕಿಯರ ಬಾಲಮಂದಿರದ ಅಧೀಕ್ಷಕರಾದ ಶಿವನಂದವ್ವಾ, ಜಿಲ್ಲಾ ಬಾಲ ಭವನ ಕಚೇರಿ ಸಹಾಯಕಿ ಮಾನು. ಎಂ ಹೂಗಾರ ಹಾಗೂ ವಿಠಲ, ಸೇರಿದಂತೆ ಮುದ್ದು ಮಕ್ಕಳು ಮತ್ತು ಪಾಲಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಜಿಲ್ಲಾ ಮಕ್ಕಳ ಸಂಸತ್ತು 2025 ಕಾರ್ಯಕ್ರಮ

ಕಲಬುರಗಿ:ನ.14:ನಗರದ ಸೇಂಟ್ ಮೇರಿ ಚರ್ಚ್ ಮದರ್ ತೆರೇಸಾ ಸಭಾಂಗಣದಲ್ಲಿ ಮಕ್ಕಳ ಹಕ್ಕುಗಳು ನಿಗಘಟಕ ಬೆಂಗಳೂರು ಹಾಗೂ ಮಾರ್ಗದರ್ಶಿ ಸಂಸ್ಥೆ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಕ್ಕಳ ಸಂಸತ್ತು 2025 ಕಾರ್ಯಕ್ರಮವನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಮಂಜುಳಾ ಪಾಟೀಲ್ ಉದ್ಘಾಟಿಸಿ ಮಾತನಾಡಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಧಿಕಾರಿಗಳು ಮಕ್ಕಳ ಕಾಯ್ದೆ ಕುರಿತು ಮಕ್ಕಳ ಹಕ್ಕುಗಳ ಕುರಿತು ಮಕ್ಕಳ ಸಹಾಯವಾಣಿ 1098 ಹಾಗೂ 112 ಬಗ್ಗೆ ಮಾಹಿತಿ ನೀಡಿದರು. ಫಾದರ್ ಪ್ರವೀಣ್ ಜೋಸೆಫ್ ರವರು ದೇವರ ಸಮಾನ ಮಕ್ಕಳಿಗೆ ಎಲ್ಲಾ ಅವಕಾಶಗಳನ್ನು ಕಲ್ಪಿಸುವುದು ಭಾರತೀಯ ಪ್ರಜೆಯ ಕರ್ತವ್ಯ ಮಕ್ಕಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಬೇಕು ಮಕ್ಕಳ ಬೆಳವಣಿಗೆಗೆ ಪ್ರೋತ್ಸಾಹಿಸಬೇಕು ಎಂಬುದಾಗಿ ಹೇಳಿದರು.

ಮಾರ್ಗದರ್ಶಿ ಸಂಸ್ಥೆಯ ನಿರ್ದೇಶಕರಾದ ಆನಂದರಾಜ್ ಸರ್ ಅವರು ಪ್ರಸ್ತಾವಿಕ ನುಡಿಯಲ್ಲಿ ಮಕ್ಕಳ ಸಂಸತ್ತು ಕಾರ್ಯಕ್ರಮ ಯಾವ ರೀತಿ ನಡೆಯುತ್ತದೆ ಎಂಬುದರ ಕುರಿತು ವಿವರಣೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಶಾಲೆಯ ಮಕ್ಕಳನ್ನು ಕರೆದುಕೊಂಡು ಬಂದು ಜಿಲ್ಲೆಯ ಮಕ್ಕಳ ಸಮಸ್ಯೆಗಳ ಕುರಿತು ಚರ್ಚೆ ಮಾಡಿ ಅದರಲ್ಲಿ ಯಾರು ಚೆನ್ನಾಗಿ ಭಾಗವಹಿಸುತ್ತಾರೋ ಆ ಮಕ್ಕಳನ್ನು

ಬೆಂಗಳೂರಿನಲ್ಲಿ ನಡೆಯುವ ವಿಧಾನಸೌಧದಲ್ಲಿ ಮಕ್ಕಳ ಸಂಸತ್ತು ಕಾರ್ಯಕ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲು ಕಲ್ಬುರ್ಗಿ ಜಿಲ್ಲೆಯ ಪ್ರತಿನಿಧಿಯಾಗಿ ಎರಡು ಮಕ್ಕಳನ್ನು ಆಯ್ಕೆ ಮಾಡಲಾಗುತ್ತದೆ ಮತ್ತು ಕಲ್ಬುರ್ಗಿ ಜಿಲ್ಲೆಯ ಸಮಸ್ಯೆಗಳ ಕುರಿತು ಪ್ರಶ್ನೆಗಳನ್ನು ಕೇಳುವ ಅವಕಾಶ ಇರುತ್ತದೆ ಎಂದು ಹೇಳಿದರು.

ಪಿಪಿಟಿ ಮೂಲಕ ಪ್ರೆಸೆಂಟೇಷನ್ ಮಾಡಿ ಮಕ್ಕಳ ಕಲಬುರಗಿ ಜಿಲ್ಲೆಯ ಸಮಸ್ಯೆಗಳನ್ನು ವಿವರಿಸಲಾಯಿತು. ಮಕ್ಕಳ ಸಂಸತ್ತು ಕಾರ್ಯಕ್ರಮದ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತಿಳಿಸಿದರು. ನಂತರ 7 ಗುಂಪುಗಳನ್ನು ಬೇರೆ ಬೇರೆ ಕಡೆ ಕೂಡಿಸಿ ಕೆಲವು ವಿಷಯಗಳನ್ನು ನೀಡಿ ಅವರು ಕೆಲವು ಅಂಶಗಳು ಮಾಡಿ ಅದನ್ನು ವೇದಿಕೆಯ ಮೇಲೆ ಬಂದು ಪ್ರೆಸೆಂಟೇಷನ್ ಮಾಡಿದರು. ಆ ಮಕ್ಕಳಲ್ಲಿ ಇಬ್ಬರೂ ಮಕ್ಕಳನ್ನು ಆಯ್ಕೆ ಮಾಡಲಾಯಿತು.

ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಪ್ರಶಸ್ತಿ ಪತ್ರವನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯ ಮನೋಹರ್ ಹಾಗೂ ಮಕ್ಕಳ ಸಹಾಯವಾಣಿ ಸಂಯೋಜಕ ಬಸವರಾಜ್ ತೆಂಗಾಳಿ, ಮಕ್ಕಳ ಸಹಾಯವಾಣಿ ಆಪ್ತ ಸಮಾಲೋಚಕ ಮಲ್ಲಯ್ಯ ಗುತ್ತೇದಾರ್, ಫಾದರ್ ಪ್ರವೀಣ್ ಜೋಸೆಫ್,

ಹರಸೂರ ಶಾಲೆಯು ಮುಖ್ಯ ಗುರು ಗಳಾದ ಶಿವಾನಂದ, ಸಹ ಶಿಕ್ಷಕರು ಹಾಗೂ ಮಾರ್ಗ ದರ್ಶಿ ಸಂಸ್ಥೆ ಎಲ್ಲಾ ಸಿಬ್ಬಂದಿ ಗಳು ಸೇರಿ ಪ್ರಶಸ್ತಿ ಪ್ರಮಾಣ ಪತ್ರ ನೀಡಿದರು.

ಮಕ್ಕಳ ಪರವಾಗಿ ಇಬ್ಬರು ಮಕ್ಕಳಾದ ಕುಮಾರಿ ಭಾಗ್ಯಶ್ರೀ ಮತ್ತು ವಿಷ್ಣು ಮಕ್ಕಳು ವೇದಿಕೆಯನ್ನು ಅಲಂಕರಿಸಿದರು. ಮಾರ್ಗದರ್ಶಿ ಸಂಸ್ಥೆ ಪ್ರೋಗ್ರಾಮ್ ಮ್ಯಾನೇಜರ್ ಸುನಂದ ಶಹಬಾದ್, ಮಾರ್ಗದರ್ಶಿ ಸಂಸ್ಥೆ ಸಂಯೋಜಕರಾದ ಶ್ರೀಮತಿ ಶೀತಲ್ ಕಟಕೆ, ಸಿಬ್ಬಂದಿಗಳಾದ ಕುಮಾರಿ ರತ್ನ, ಆನಂದ್ ಶರ್ಮಾ, ಕಿರಣ್, ಭರತೇಶ್ ಶೀಲವಂತ, ಬಸವರಾಜ ಸೇರಿದಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಿಬ್ಬಂದಿ ಭಾಗವಹಿಸಿದರು.






Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401